ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 16.06.2026

ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀಮತಿ ಆರ್.ಹೆಚ್.ಆರ್ ವಕೀಲರಿಂದ

1. ನಾನು 8 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆಯನ್ನು ಓದಲು ಬರೆಯಲು ಬರುತ್ತದೆ. ನಾನು ಪ್ರತಿವಾದಿಯು ಬರೆದುಕೊಟ್ಟ ಕ್ರಯದ ಕರಾರಿನ ನೆರವೇರಿಕೆಗಾಗಿ ದಾವಾ ದಾಖಲಿಸಿರುತ್ತೇನೆ. ಕ್ರಯದ ವ್ಯವಹಾರವು ಪ್ರತಿವಾದಿಯ ಮನೆಯಲ್ಲಿಯೆ ಆಗಿರುತ್ತದೆ. ಕ್ರಯದ ಕರಾರು ಪತ್ರ ಬರೆಯುವ ಮುಂಚಿನ 15 ದಿನಗಳಲ್ಲಿ ಕ್ರಯದ ಮಾತುಕತೆಯಾಗಿರುತ್ತದೆ. ಮಾತುಕತೆಗೆ ನನ್ನ ಗಂಡ, ನನ್ನ ಸಹೋದರರಾದ ಸೋಮ ಮತ್ತು ರವಿ ಹೋಗಿದ್ದೆವು. ಪ್ರತಿವಾದಿಯ ಮನೆಯಲ್ಲಿ ಪ್ರತಿವಾದಿ ಅವರ ಹೆಂಡತಿ ಮತ್ತು ಅವರ ಕಿರಿಯ ಮಗ ಇದ್ದರು. ಪ್ರತಿವಾದಿಯ ಕಿರಿಯ ಮಗನ ಹೆಸರು ನನಗೆ ನೆನಪಿಲ್ಲ. ಪ್ರತಿವಾದಿಗೆ ಮೂರು ಜನ ಮಕ್ಕಳು ಇದ್ದಾರೆ. ಪ್ರತಿವಾದಿಯ ಹೆಣ್ಣು ಮಕ್ಕಳ ಜೊತೆ ನಾನು ಕ್ರಯದ ವ್ಯವಹಾರ ಮಾಡಿರುವುದಿಲ್ಲ.

2. ನಮ್ಮ ಕುಟುಂಬವು ವ್ಯವಸಾಯದ ಕುಟುಂಬ ಆಗಿರುತ್ತದೆ. ಕ್ರಯದ ಮಾತುಕತೆಯು 15,00,000/- ಕ್ಕೆ ತೀರ್ಮಾನ ಆಗಿರುತ್ತದೆ. ಪತ್ರ ಬರೆಯುವ ಸಮಯದಲ್ಲಿ ಪ್ರತಿವಾದಿಗೆ ನಾನು 14,00,000/- ರೂಪಾಯಿಗಳನ್ನು ನೀಡಿರುತ್ತೇನೆ. ಆ ಸಮಯದಲ್ಲಿ ಪ್ರತಿವಾದಿ ಮತ್ತು ಆತನ 2 ನೇ ಮಗ ಇದ್ದರು. ನಾನು ಪ್ರತಿವಾದಿಗಳಿಗೆ ನೀಡಿದ ಹಣವು ನಮ್ಮ ಮನೆಯಲ್ಲಿಯೆ ಇತ್ತು. ಪ್ರತಿವಾದಿಗೆ

ನಾನು ನಗದು ರೂಪದಲ್ಲಿ 14,00,000/- ರೂಪಾಯಿ ನೀಡಿರುತ್ತೇನೆ. ನಾನು ಅವರಿಗೆ 100 ರೂ ಮುಖಬೆಲೆಯ ನೋಟುಗಳನ್ನು ನೀಡಿರುತ್ತೇನೆ.

3. ಪ್ರತಿವಾದಿಯು ವ್ಯವಹಾರಕ್ಕಿಂತಲೂ ಮುಂಚೆಯೆ ನನಗೆ ಗೊತ್ತು. ಪ್ರತಿವಾದಿಯ ಮೊದಲನೇ ಮಗನಿಗೆ ನನ್ನ ಅಕ್ಕಳನ್ನು ಕೊಟ್ಟು ಮದುವೆ ಮಾಡಿರುತ್ತೇವೆ. ನನ್ನ ಬಳಿ ಇದ್ದ ಒಡವೆಯನ್ನು ಮಾರಾಟ ಮಾಡಿ ಮತ್ತು ಸ್ವಲ್ಪ ಹಣವನ್ನು ನನ್ನ ತಂದೆಯ ಮನೆಯಿಂದ ಪಡೆದು 14,00,000/- ರೂಪಾಯಿಗಳನ್ನು ನನ್ನ ಬಳಿ ಇಟ್ಟುಕೊಂಡಿದ್ದೆ. ಒಡವೆಯನ್ನು ಮಾರಾಟ ಮಾಡಿದ್ದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ. ಪ್ರತಿವಾದಿಗೆ ಕಿವಿ ಕೇಳಿಸುವುದಿಲ್ಲ ಮತ್ತು ಕಣ್ಣು ಕಾಣಿಸುವುದಿಲ್ಲ ನಾನು ಮತ್ತು ಪ್ರತಿವಾದಿಯ 1 ಮತ್ತು 2 ನೇ ಗಂಡು ಮಕ್ಕಳು ಪರಸ್ಪರ ಶ್ಯಾಮಿಲಾಗಿ ಸೊಸೈಟಿಯಲ್ಲಿ ಸಾಲ ಕೊಡಿಸುತ್ತೇನೆಂದು ಆತನನ್ನು ಕರೆದುಕೊಂಡು ಬಂದು ಸುಳ್ಳು ಕ್ರಯದ ಕರಾರು ಪತ್ರವನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ 14,00,000/- ರೂಪಾಯಿ ಕೊಡುವಷ್ಟು ನನಗೆ ಆರ್ಥಿಕ ಚೈತನ್ಯ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಒಡವೆಗಳನ್ನು ಮಾರಾಟ ಮಾಡಿಲ್ಲ ಹಾಗೂ ಪ್ರತಿವಾದಿಗೆ ಹಣ ನೀಡಿಲ್ಲ ಎಂದರೆ ಸರಿಯಲ್ಲ.

4. ಪತ್ರ ಬರೆಯು ಸಮಯದಲ್ಲಿ ನನ್ನ ಗಂಡನಾದ ಕುಮಾರ, ಪ್ರತಿವಾದಿ, ಅವರ 2 ನೇ ಮಗ ಹಾಗೂ ನಮ್ಮ ಗ್ರಾಮದ ಇಬ್ಬರೂ ಸಾಕ್ಷಿದಾರರು ಇದ್ದರು. ಪತ್ರದಲ್ಲಿ ನಂದಿನಿ ಮತ್ತು ರಜಿನಿ ಎಂಬುವವರು ಸಾಕ್ಷಿದಾರರಾಗಿರುತ್ತಾರೆ. ಅವರು ಇಂಗ್ಲೀಷ್ ಭಾಷೆಯಲ್ಲಿ ಕ್ರಯದ ಕರಾರು ಪತ್ರಕ್ಕೆ ಸಹಿ ಮಾಡಿರುತ್ತಾರೆ. ಪತ್ರವನ್ನು ಬರೆಯಲು ನನ್ನ ಗಂಡ ಮಾಹಿತಿ ನೀಡಿರುತ್ತಾರೆ.

**(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.)**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.